# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 479 |
| ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್ ವಿಶ್ವನಾಥ್<br>(ನಾಮನಿರ್ದೇಶಿತ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.12.2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವು ಪರದೇಶದ ಭಾಷೆಯಾದ ಆಂಗ್ಲ ಭಾಷೆಗೆ ಅಧಿಕೃತ ಸ್ಥಾನಮಾನ ಕಲ್ಪಿಸಿರುವುದು ಸಂವಿಧಾನದ ಮುನ್ನುಡಿಯ ಸಾರ್ವಭೌಮ ತತ್ವದ ಉಲ್ಲಂಘನೆಯಾಗುವುದಿಲ್ಲವೇ: | ಭಾಷಾ ಬಳಕೆಯ ಕುರಿತಂತೆ ಒಕ್ಕೂಟ ವ್ಯವಸ್ಥೆಗೆ ಸಾಂವಿಧಾನಿಕ ಅವಕಾಶಗಳು ನಿರ್ದೇಶನಯುಕ್ತವಾಗುತ್ತವೆ. ಸಂವಿಧಾನದ ನಿರ್ದೇಶನದಂತೆಯೇ ಆಂಗ್ಲ ಭಾಷೆಯನ್ನು ರಾಜ್ಯಗಳು ಬಳಸುವ ತತ್ವವನ್ನು ಅನುಸರಿಸುತ್ತವೆ. ಸಂವಿಧಾನದ 343ನೇ ಅನುಚ್ಛೇದವು ಇದನ್ನು ನಿರ್ದಿಷ್ಟಪಡಿಸುತ್ತದೆ. |
| ಆ) | ಕನ್ನಡ ಭಾಷೆಗೆ ಸರಿಸಮಾನವಾಗಿ ಪರಕೀಯರ ಭಾಷೆಯಾದ ಆಂಗ್ಲ ಭಾಷೆಗೆ ಅಧಿಕೃತ ಸ್ಥಾನಮಾನ ಕಲ್ಪಿಸಿರುವುದು ಕನ್ನಡ ಭಾಷೆಯ ಸಾರ್ವಭೌಮಕ್ಕೆ ಧಕ್ಕೆಯಾಗುವುದಿಲ್ಲವೇ: | ಒಕ್ಕೂಟ ವ್ಯವಸ್ಥೆಯಲ್ಲಿ ಸಾಂವಿಧಾನಿಕ ನಿರ್ದೇಶನಗಳನ್ನು ಗೌರವಿಸಬೇಕಾದ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ಆಂಗ್ಲ ಭಾಷೆಗೆ ರಾಜ್ಯ ಸರ್ಕಾರದ ಆಡಳಿತದಲ್ಲಿ ಅಧಿಕೃತ ಸ್ಥಾನಮಾನವನ್ನು ಸ್ಥಗಿತಗೊಳಿಸಲು ದಲಿತ ಸಂಘರ್ಷ ಸಮಿತಿಯು ಸಲ್ಲಿಸಿದ್ದ ಮನವಿಯ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ದಿನಾಂಕ:11.11.2025 ರಂದು ಕಾನೂನು ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದು ಈ ಕುರಿತು ಕೈಗೊಂಡಿರುವ ಕ್ರಮಗಳೇನು: | ಆಂಗ್ಲ ಭಾಷೆಗೆ ರಾಜ್ಯ ಸರ್ಕಾರದ ಆಡಳಿತದಲ್ಲಿ ಅಧಿಕೃತ ಸ್ಥಾನಮಾನವನ್ನು ಸ್ಥಗಿತಗೊಳಿಸಲು ದಲಿತ ಸಂಘರ್ಷ ಸಮಿತಿಯು ಸಲ್ಲಿಸಿದ್ದ ಮನವಿಯ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ದಿನಾಂಕ: 11.11.2025 ರಂದು ಕಾನೂನು ಸಚಿವರಿಗೆ ಬರೆದಿರುವ ಪತ್ರವು ಪ್ರಸ್ತುತ ಕಾನೂನು ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |
| ಈ) | ಸಾಮಾಜಿಕ ಚಿಂತಕರಾದ ಅರ್ಜಿದಾರರು ನಡೆಸಿರುವ ವಿಶ್ವಸಂಸ್ಥೆಯ ಸದಸ್ಯಗಳಾದ 195 ಸಾರ್ವಭೌಮ ದೇಶಗಳಲ್ಲಿನ ಭಾಷಾ ನೀತಿಗಳ ತುಲನಾತ್ಮಕ ಅಧ್ಯಾಯನದ ವರದಿಯನ್ನು ದಿನಾಂಕ: 18.11.2025 ರಂದು ಸಲ್ಲಿಸಿದ್ದು, ಈ ಕುರಿತು ಕೈಗೊಂಡಿರುವ ಕ್ರಮಗಳೇನು: | ಈ ರೀತಿಯ ವರದಿಯು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಉ) | ಕೇಂದ್ರ ಸರ್ಕಾರವು ಭಾರತವನ್ನು ಸ್ವಾಭಿಮಾನಿ ದೇಶವನ್ನಾಗಿಸಲು ಆಂಗ್ಲ ಭಾಷೆಯನ್ನು ತೊರೆದು ಎಲ್ಲಾ ಭಾರತೀಯ ಭಾಷೆಗಳಲ್ಲಿ ಮಾತ್ರವೇ ಆಡಳಿತ ನೀಡಲು "ಭಾರತೀಯ ಭಾಷಾ ಅನುಭಾಗ್" ಎಂಬ ಹೊಸ ವಿಭಾಗವನ್ನು ತೆರೆದಿದ್ದು, ರಾಜ್ಯ ಸರ್ಕಾರವೂ ಕೂಡ ಅದೇ ನಿಟ್ಟಿನಲ್ಲಿ ಆಂಗ್ಲ ಭಾಷೆಯನ್ನು ತೊರೆದು ಕನ್ನಡದಲ್ಲಿ ಮಾತ್ರವೇ ಆಡಳಿತ ನೀಡಲು ಕೈಗೊಂಡಿರುವ ಕ್ರಮಗಳೇನು? | ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |

ಸಂಖ್ಯೆ: ಕಸಂವಾ 111 ಕೆಒಎಲ್ ಆಕ 2025

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು